Dr. RAJKUMAR IAS/KAS ACADEMY

AN INITIATIVE BY DR. RAJKUMAR FAMILY

# Mission Sarkari Jobs

## ನೇಮಕಾತಿ ಅಧಿಸೂಚನೆ :

## ಸಿವಿಲ್ ನ್ಯಾಯಾಧೀಶರು - ಕರ್ನಾಟಕ ಉಚ್ಚ ನ್ಯಾಯಾಲಯ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 15-05-2026**

---

ಕರ್ನಾಟಕ ಉಚ್ಚ ನ್ಯಾಯಾಲಯವು ಖಾಲಿ ಇರುವ ಸಿವಿಲ್ ನ್ಯಾಯಾಧೀಶರ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ.

| ಹುದ್ದೆ | ವೇತನ ಶ್ರೇಣಿ | ವಿದ್ಯಾರ್ಹತೆ |
|---|---|---|
| ಸಿವಿಲ್ ನ್ಯಾಯಾಧೀಶರು | 77,840 - 1,36,520 /- | 1. ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾಗಿರುವ ವಿಶ್ವವಿದ್ಯಾನಿಲಯವು ನೀಡಿರುವ ಕಾನೂನು ಪದವಿಯನ್ನು ಪಡೆದಿರಬೇಕು. **ಮತ್ತು**<br>2. ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಅಥವಾ ದೇಶದ ಉಚ್ಚ ನ್ಯಾಯಾಲಯಗಳಲ್ಲಿ ಅಥವಾ ಜಿಲ್ಲಾ ಮತ್ತು ಅಧಿವಿಚಾರಣಾ ನ್ಯಾಯಾಲಯಗಳಲ್ಲಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿರಬೇಕು ಮತ್ತು ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರಗೆ ನಿರಂತರವಾಗಿ ವೃತ್ತಿಯನ್ನು ಮಾಡಿರಬೇಕು ಅಥವಾ ಕೇಂದ್ರ ಸರ್ಕಾರ ಅಥವಾ ದೇಶದ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ನ್ಯಾಯವಾದಿಯಾಗಿ ಕೆಲಸ ನಿರ್ವಹಿಸಿರಬೇಕು ಮತ್ತು ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿವರೆಗೆ ಕಾರ್ಯನಿರ್ವಹಿಸಿರಬೇಕು. |

Dr.Rajkumar IAS/KAS Academy

**ವಯೋಮಿತಿ** :

ಸಾಮಾನ್ಯ : 40 ವರ್ಷಗಳು ಮೀರಿರಬಾರದು

ಪ್ರವರ್ಗ 2ಎ, 2ಬಿ, 3ಎ, 3ಬಿ : 43 ವರ್ಷಗಳು ಮೀರಿರಬಾರದು

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 : 45 ವರ್ಷಗಳು ಮೀರಿರಬಾರದು

ಮಾಜಿ ಸೈನಿಕ : ಗರಿಷ್ಠ ವಯೋಮಿತಿಯಲ್ಲಿ ಮೂರು ವರ್ಷಗಳ ಸಡಿಲಿಕೆ

**ಆಯ್ಕೆ ವಿಧಾನ** :

(ಎ) ಪೂರ್ವಭಾವಿ ಪರೀಕ್ಷೆ

(ಬಿ) ಮುಖ್ಯ ಪರೀಕ್ಷೆ ಮತ್ತು

(ಸಿ) ಮೌಖಿಕ ಸಂದರ್ಶನ

(ಎ) **ಪೂರ್ವಭಾವಿ ಪರೀಕ್ಷೆ:**

ಪೂರ್ವಭಾವಿ ಪರೀಕ್ಷೆಯನ್ನು 100 ಅಂಕಗಳಿಗೆ ವಸ್ತುನಿಷ್ಠ ಮಾದರಿಯ ಪ್ರಶ್ನೆ ಪತ್ರಿಕೆಯ ರೂಪದಲ್ಲಿ ನಡೆಸಲಾಗುತ್ತದೆ ಮತ್ತು ಸದರಿ ಪರೀಕ್ಷೆಯ ಪಠ್ಯಕ್ರಮವು ಈ ಕೆಳಕಂಡಂತಿರುತ್ತದೆ:-

**ಭಾಗ – ಎ:** ದಿವಾಣಿ ಪ್ರಕ್ರಿಯಾ ಸಂಹಿತೆ, 1908;
ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881;
ಸ್ವತ್ತು ವರ್ಗಾವಣೆ ಅಧಿನಿಯಮ, 1882;
ಭಾರತೀಯ ಕರಾರು ಅಧಿನಿಯಮ, 1872;
ನಿರ್ದಿಷ್ಟ ಪರಿಹಾರ ಅಧಿನಿಯಮ, 1963;
ಭಾರತದ ಸಂವಿಧಾನ; ಮತ್ತು
ಕರ್ನಾಟಕ ಬಾಡಿಗೆ ಅಧಿನಿಯಮ, 1999.

**ಭಾಗ – ಬಿ:** ದಂಡ ಪ್ರಕ್ರಿಯಾ ಸಂಹಿತೆ, 1973 ಮತ್ತು
ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023;
ಭಾರತೀಯ ದಂಡ ಸಂಹಿತೆ, 1860 ಮತ್ತು
ಭಾರತೀಯ ನ್ಯಾಯ ಸಂಹಿತೆ, 2023;
ಭಾರತೀಯ ಸಾಕ್ಷ್ಯ ಅಧಿನಿಯಮ, 1872 ಮತ್ತು
ಭಾರತೀಯ ಸಾಕ್ಷ್ಯ ಅಧಿನಿಯಮ, 2023;

**ಭಾಗ – ಸಿ:** ಸಾಮಾನ್ಯ ಜ್ಞಾನ – ತಾರ್ಕಿಕ ಮತ್ತು
ಮನೋಸಾಮರ್ಥ್ಯ ಪರೀಕ್ಷೆ.

KAS Academy

(ಬಿ) **ಮುಖ್ಯ ಪರೀಕ್ಷೆ:–**

(i) **ಭಾಷಾಂತರ ಪತ್ರಿಕೆ** (ಗರಿಷ್ಠ ಅಂಕಗಳು 100)

ಒಂದು ಭಾಷಾಂತರ ಪತ್ರಿಕೆಯಿದ್ದು, ಅಭ್ಯರ್ಥಿಗಳು ಆಂಗ್ಲಭಾಷೆಯಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಆಂಗ್ಲಭಾಷೆಗೆ ಕೆಲವು ಉದ್ಧೃತ ಭಾಗಗಳನ್ನು ಭಾಷಾಂತರಿಸುವ ಅಗತ್ಯವಿರುತ್ತದೆ. ಉದ್ಧೃತ ಭಾಗಗಳನ್ನು (1) ಹೇಳಿಕೆಗಳು (2) ತೀರ್ಪುಗಳು ಮತ್ತು (3) ದಸ್ತಾವೇಜುಗಳಿಂದ ಆರಿಸಿ ತೆಗೆದುಕೊಳ್ಳಲಾಗಿರುತ್ತದೆ.

(ii) **ಕಾನೂನು ಪತ್ರಿಕೆ – I** (ಗರಿಷ್ಠ ಅಂಕಗಳು 100)

ದಿವಾಣಿ ಪ್ರಕ್ರಿಯಾ ಸಂಹಿತೆ 1908<br>
ದಂಡ ಪ್ರಕ್ರಿಯಾ ಸಂಹಿತೆ, 1973 ಮತ್ತು<br>
ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023;<br>
ಭಾರತೀಯ ಸಾಕ್ಷ್ಯ ಅಧಿನಿಯಮ, 1872 ಮತ್ತು<br>
ಭಾರತೀಯ ಸಾಕ್ಷ್ಯ ಅಧಿನಿಯಮ, 2023;<br>
ವಾದ ತತ್ವಗಳು ಮತ್ತು ಭಾರತೀಯ ಸಂವಿಧಾನ

**ಕಾನೂನು ಪತ್ರಿಕೆ – II** (ಗರಿಷ್ಠ ಅಂಕಗಳು 100)

ಸಿವಿಲ್ ಪ್ರಕರಣಗಳಲ್ಲಿ ವಿವಾದಾಂಶಗಳನ್ನು ರೂಪಿಸುವುದು ಮತ್ತು ತೀರ್ಪುಗಳನ್ನು ಬರೆಯುವುದು.

(iii) **ಕಾನೂನು ಪತ್ರಿಕೆ – III** (ಗರಿಷ್ಠ ಅಂಕಗಳು 100)

ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಣೆಗಳನ್ನು ರೂಪಿಸುವುದು ಮತ್ತು ತೀರ್ಪುಗಳನ್ನು ಬರೆಯುವುದು.

(ಸಿ) **ಮೌಖಿಕ ಸಂದರ್ಶನ** (ಗರಿಷ್ಠ ಅಂಕಗಳು 100)

ಅಭ್ಯರ್ಥಿಗಳ ಸಾಮಾನ್ಯ ಜ್ಞಾನ, ಕಾನೂನು ತತ್ವಗಳ ಗ್ರಹಿಕೆ ಮತ್ತು ಸಿವಿಲ್ ನ್ಯಾಯಾಧೀಶರಾಗಿ ನೇಮಕವಾಗಲು ಅವರಿಗಿರುವ ಅರ್ಹತೆಗಳನ್ನು ಪರೀಕ್ಷಿಸಲಾಗುವುದು.

(ಡಿ) **ಕಂಪ್ಯೂಟರ್ ಜ್ಞಾನದ ಪರೀಕ್ಷೆ (ಗರಿಷ್ಠ ಅಂಕಗಳು 25)**

ಕಂಪ್ಯೂಟರ್ ಜ್ಞಾನದ ಪರೀಕ್ಷೆಯು 25 ಅಂಕಗಳಿಗೆ ಇರುತ್ತದೆ. ಅಭ್ಯರ್ಥಿಗಳು ಗಳಿಸಿದ ಈ ಅಂಕಗಳನ್ನು ಅವರ ಅರ್ಹತೆಯನ್ನು ನಿಶ್ಚಿತಪಡಿಸಲು ಪರಿಗಣಿಸಲಾಗುತ್ತದೆ ಮತ್ತು ಅಭ್ಯರ್ಥಿಗಳು ಕಂಪ್ಯೂಟರ್ ಜ್ಞಾನದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು, ಮುಖ್ಯ ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳಿಗೆ ಸೇರಿಸಲಾಗುವುದಿಲ್ಲ.

ಸೂಚನೆ : ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯನ್ನು ಆಂಗ್ಲ ಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಬರೆಯಲು ಅವಕಾಶವಿದೆ.

**ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು, ಹುದ್ದೆಗಳ ವರ್ಗೀಕರಣ, ಅಧಿಸೂಚನೆ ಕುರಿತು ಹೆಚ್ಚಿನ ಮಾಹಿತಿಗಾಗಿ ನೇಮಕಾತಿ ಪ್ರಾಧಿಕಾರದ ವೆಬ್ ಸೈಟ್ :**

https://judiciary.karnataka.gov.in/recsubnotify.php?p=1188&stateNM=

---

**ಉಚಿತ ಸಮಾಲೋಚನೆ ಮತ್ತು ಮಾರ್ಗದರ್ಶನಕ್ಕಾಗಿ ಇಂದೇ ನಮ್ಮ ಅಕಾಡೆಮಿಗೆ ಭೇಟಿ ನೀಡಿ.**

**ಡಾ.ರಾಜ್ ಕುಮಾರ್ ಐ.ಎ.ಎಸ್/ಕೆ.ಎ.ಎಸ್ ಅಕಾಡೆಮಿ**

#2952/ಇ, ಪಶ್ಚಿಮ ಕಾರ್ಡ್ ರಸ್ತೆ, ಮಾರುತಿ ಮಂದಿರ ಎದುರು,
ವಿಜಯನಗರ, ಬೆಂಗಳೂರು – 560040
ಸಂಪರ್ಕಿಸಿ: 9108448444/9108449444 ವೆಬ್ ಸೈಟ್: www.drrajkumaracademy.com

Dr.Rajkumar IAS/KAS Academy